ಹದಿಹರೆಯದ ಕುಂಞಮ್ಮ ಮತ್ತೆ ತನ್ನ ಹೋರಾಟದ ಬದುಕನ್ನು ಮುಂದುವರಿಸುತ್ತಾರೆ. ರಾಘವನ್ ಎನ್ನುವ ವ್ಯಕ್ತಿಯ ಪರಿಚಯವಾಗಿ ಅದು ಮದುವೆಯ ಹಂತಕ್ಕೂ ತಲುಪುತ್ತದೆ. ಮಗನೊಬ್ಬ ಹುಟ್ಟುವ ಸಮಯದಲ್ಲೇ ಆತ ಕುಂಞಮ್ಮ ಬಲು ಜತನದಿಂದ ಇರಿಸಿಕೊಂಡಿದ್ದ (ಗಂಡನ ಗೆಳೆಯ, ದಾಮೋದರನ್ ನಾಯರ್, ಈಕೆ ತಪ್ಪಿಸಿಕೊಳ್ಳಲು ಸಹಾಯ ಮಾಡಿದವರು ನೀಡಿದ ಸಹಾಯಧನ) ಆಪದ್ಧನದ ಸಮೇತ ಪರಾರಿಯಾಗುತ್ತಾನೆ. ಜಯಕುಮಾರ್ ಬರೆಯುತ್ತಾರೆ, 'ನನ್ನ ಹುಟ್ಟಿಗೂ, ನನ್ನ ಆರ್ ಎನ್ನುವ ಇನಿಶಿಯಲ್‌ಗೂ ಕಾರಣನಾದ ವ್ಯಕ್ತಿ' ಎಂದು.

ಬದುಕು ಹೀಗೆ ಬಾ ಎಂದು ಕರೆಯುತ್ತಲೇ ಕುಂಞಮ್ಮರಿಗೆ ಪ್ರತಿ ಬಾರಿಯೂ ಕೊಟ್ಟದ್ದು ನೋವಿನ ಬುತ್ತಿಯನ್ನೇ. ಈ ಸಹೋದರರನ್ನು ಕುರಿತು ನಾನು ಅಪೂರ್ವ ಸಹೋದರರು ಎಂದೆ. ಆಶ್ಚರ್ಯ ಹುಟ್ಟಿಸುತ್ತದೆ ಇವರಿಬ್ಬರ ನಡುವಿನ ಅನುಬಂಧ. ಕೃತಿ ಆರಂಭವಾಗುವುದೇ ಜಯಕುಮಾರ್ ತೀರಿಕೊಂಡ ತನ್ನ ಅಣ್ಣನ ಜೊತೆ ನಡೆಸುವ ಮಾತುಕತೆಯ ಮೂಲಕ. ಅಣ್ಣ ಕೇಳುತ್ತಾರೆ:

'ಬಂದೆಯಾ ಕುಮಾರ?'

'ನಿನಗೆ ಹುಷಾರಿಲ್ಲದ ವಿಚಾರ ತಿಳಿಯಿತು. ಬೇಸರವೂ ಆಯಿತು... ನೀನು ನನ್ನ ತಮ್ಮ ಅನ್ನೋದಕ್ಕಿಂತ ಗೆಳೆಯ ಎನ್ನಬಹುದು...'

ಎಂದರೆ ಅಣ್ಣನನ್ನು ಇವರು ಭೇಟಿಯಾಗುತ್ತಿರುವುದು, ಸಾವಿನ ಲೋಕದಲ್ಲಿ. ಸಾವಿನ ಸೂಚನೆ ಸಿಕ್ಕಿದ್ದ ಜಯಕುಮಾರ್ ತನ್ನ ಸಾವಿನ ನಂತರದಲ್ಲಿ ಭೇಟಿಯಾಗುವ ಅಣ್ಣನ ಜೊತೆಯ ಮಾತುಕತೆಯಿಂದಲೇ ಆರಂಭಿಸುತ್ತಾರೆ. ತನ್ನ ಸಾವನ್ನು ಅಕ್ಷರಮಟ್ಟಿಗೆ ಸಮಾಧಾನದಿಂದ ಒಪ್ಪಿಕೊಂಡಿದ್ದಾರೆ. ಆದ್ದರಿಂದ ಒಂದು ರೀತಿಯಲ್ಲಿ ಇದನ್ನು ಜೀವನ ಚರಿತ್ರೆ ಎಂದೂ ಕರೆಯಬಹುದೇನೋ!

ಹದಿಮೂರು ವರ್ಷಗಳ ವ್ಯತ್ಯಾಸ ಇವರಿಬ್ಬರಿಗೂ. ಬಾಲ್ಯದಿಂದಲೂ, ಈತ ಮತ್ತೊಬ್ಬ ಅಪ್ಪನಿಗೆ ಹುಟ್ಟಿದವನು ಎನ್ನುವ ಅಂಶವನ್ನು ಎಂದಿಗೂ ಗಮನಕ್ಕೇ ಇಟ್ಟುಕೊಳ್ಳದೇ ತನ್ನನ್ನು ಪೊರೆದ ಅಣ್ಣನ ಬಗೆಗೆ ಕೊನೆಯಿಲ್ಲದ ಪ್ರೀತಿ ಇವರಿಗೆ. ಚಿಕ್ಕಮಗನನ್ನು ಶಾಲೆಗೆ ಸೇರಿಸುವುದಕ್ಕಿಂತ ಮುಂಚೆಯೇ ಎಳೆಮಗುವನ್ನು ಮನೆಯಲ್ಲಿ ಬಿಟ್ಟು ಅಮ್ಮ ಕೂಲಿ ಕೆಲಸಕ್ಕೆ ಹೋದರೆ, ಈ ಅಣ್ಣನೇ ಶಾಲೆಯಿಂದ ಬಂದು ಮಧ್ಯಾಹ್ನದ ಊಟ ಮಾಡಿಸುವುದು, ಆಟವಾಡಿಸುವುದು ಎಲ್ಲವನ್ನೂ ಮಾಡುತ್ತಿದ್ದರಂತೆ. ಈ ಅಣ್ಣ ಮುಂದೆ ಕೆಲವು ಸಂದರ್ಭಗಳಲ್ಲಿ ತ್ಯಾಗ ಮಾಡಿ ತಮ್ಮನನ್ನು ನೋಡಿಕೊಳ್ಳುವ ವಿವರಗಳು ಬರುತ್ತವೆ. ಈ ಅಣ್ಣ ಕೊನೆಯವರೆಗೂ ಪೂಜೆ ಸಲ್ಲಿಸುತ್ತಿದ್ದದ್ದು ತಾಯಿಗೆ, ಆಕೆಯ ಕಾಲಾನಂತರ ಆಕೆಯ ಫೋಟೋಕ್ಕೆ ಮಾತ್ರ ಎನ್ನುವ ವಿವರವಿದೆ. ಆ ಕರಾಳ ರಾತ್ರಿ ಅಮ್ಮ ತನ್ನನ್ನು ಕೈಹಿಡಿದು ನಡೆಸುತ್ತಾ, ಎಳೆಯ ಕೂಸೊಂದನ್ನು (ಆ ಮಗು ಉಳಿಯುವುದಿಲ್ಲ) ಅವುಚಿಕೊಂಡು ಗಂಜಿಯ ಹಿಟ್ಟು, ಹಾಲಿನ ಪುಡಿ, ರೈಲುಚೊಂಬೊಂದರಲ್ಲಿ ನೀರು – ಇಷ್ಟನ್ನು ಹಿಡಿದುಕೊಂಡು ನೂರಾರು ಮೈಲಿ ನಡೆದ ಆಕೆ, ಈ ಪುಟ್ಟ ಬಾಲಕನ ಕಣ್ಣಿನಲ್ಲಿ, ಮನಸ್ಸಿನಲ್ಲಿ ದೈವದ ಸ್ಥಾನವನ್ನು ಸಹಜವಾಗಿಯೇ ಪಡೆದುಕೊಂಡಿರಬೇಕು. ಆದರೆ

